ಮಾಡಿದ್ದರೆ ಕೂಡಲೇ ಪೊಲೀಸ್ ಸ್ಟೇಷನ್‌ಗೆ ಯಾಕೆ ಬಂದ? ತಪ್ಪಿಸಿಕೊಳ್ಳೋ ಪ್ರಯತ್ನ ಮಾಡ್ತಿರಲಿಲ್ವೇ?" ಎಂದು ವಾದ ಮಂಡಿಸಿದರು ಅಂಜನಾಸುತ ಅವರು.

"ಏನ್ರೀ... ಅಂಜನಾಸುತ ಅವರೇ, ನೀವು ಇಷ್ಟು ಖ್ಯಾತ ಕ್ರಿಮಿನಲ್ ವಕೀಲರಾಗಿದ್ದೀರ, ಈ ಆಪಾದಿತನಿಗೆ ಜಾಮೀನು ಕೊಡಲು ಇಷ್ಟು ವಿಷಯ ಸಾಕಾಗುತ್ತದೇನ್ರೀ? ಅವನ ಬೆರಳ ಗುರುತು ಬಗ್ಗೆ ಏನೂ ಹೇಳ್ತನೇ ಇಲ್ವಲ್ಲ ನೀವು'' ಎಂದು ಜಡ್ಜ್ ಸಾಹೇಬರು ಕೇಳಿದರು. ಆಗ ಅಂಜನಾಸುತ ಅವರು "ಇಲ್ಲ ಮೈ ಲಾರ್ಡ್, ನನ್ನ ಕಕ್ಷಿದಾರ ಆ ದಿನ ಬೆಳಗ್ಗೆ ಬಿಲ್ ಪಡೆಯಲು ಲಾಡ್ಜ್‌ಗೆ ಹೋಗಿದ್ದರು. ಮ್ಯಾನೇಜರ್‌ರಿಂದ ಬಿಲ್ ಪಡೆದು ಅಲ್ಲಿಯೇ ಇರುವ ಹೋಟೆಲ್‌ನಲ್ಲಿ ತಿಂಡಿ ತಿಂದು ಕಾಫಿ ಕುಡಿದು ಆಫೀಸಿಗೆ ಹೊದರು. ಈ ಬಗ್ಗೆ ಹೋಟೆಲ್ ಕಮ್ ಲಾಡ್ಜಿನ ಮ್ಯಾನೇಜರ್ ಹೇಳಿಕೆ ಕೊಟ್ಟಿದ್ದಾರೆ. ಆಪಾದಿತ ಹೊರಗೆ ಹೋದ ಸ್ವಲ್ಪ ಸಮಯದಲ್ಲಿಯೇ ಆ ಯುವತಿ ರೂಂ ಬೇಕೆಂದು ಬಂದಿದ್ದಾಳೆ. ಮ್ಯಾನೇಜರ್ ನಮ್ಮ ಕಕ್ಷಿದಾರರಾದ ಸುನೀಲ್ ಅವರ ಹೆಸರಿನಲ್ಲಿ ರಿಜಿಸ್ಟರ್ ಆಗಿದ್ದ ರೂಮನ್ನೇ ಆಕೆಗೆ ಕೊಟ್ಟಿದ್ದಾರೆ. ಈ ಆಪಾದಿತ ತಿಂಡಿ ತಿಂದು ಕಾಫಿ, ಕುಡಿದ ತಟ್ಟೆ ಲೋಟ ಚಾಕು, ಫೋರ್ಕುಗಳನ್ನು ತೆಗೆದುಕೊಂಡು ಹೋಗುತ್ತಿದ್ದ ರೂಂ ಬಾಯ್‌ನನ್ನು ಕರೆದು ಆಕೆಗೆ ರೂಂ ತೋರಿಸಲು ಮ್ಯಾನೇಜರ್ ಹೇಳಿದ್ದಾರೆ. ರೂಂ ಬಾಯ್ ಆಕೆಗೆ ರೂಮನ್ನು ತೋರಿಸಿ ನನ್ನ ಕಕ್ಷಿದಾರ ತಿಂಡಿ ತಿನ್ನಲು ಉಪಯೋಗಿಸಿದ ತಟ್ಟೆ ಲೋಟ ಚಾಕು ಫೋರ್ಕುಗಳನ್ನು ಮರೆತು ಆ ರೂಮಿನಲ್ಲಿಯೇ ಬಿಟ್ಟು ಬಂದಿದ್ದಾರೆ. ಈ ಬಗ್ಗೆ ಮ್ಯಾನೇಜರ್ ಹಾಗೂ ರೂಂ ಬಾಯ್ ನೀಡಿದ ಲಿಖಿತ ಹೇಳಿಕೆಯನ್ನ ಹಾಜರು ಪಡಿಸುತ್ತಿದ್ದೇನೆ ಯುವರ್ ಆನರ್. ಹಾಗೆಯೇ ಗಮನಿಸಬೇಕಾದ ಅಂಶವೆಂದರೆ ಸುಂದರಿ ಲಾಡ್ಜ್ ಸಾಧಾರಣ ಲಾಡ್ಜ್ ಆದ್ದರಿಂದ ಅಲ್ಲಿ ಹೋಟೆಲ್ ಹಾಗೂ ಲಾಡ್ಜ್‌ನ ಮ್ಯಾನೇಜರ್ ಒಬ್ಬರೇ ಆಗಿದ್ದಾರೆ. ಹಾಗೂ ಹೋಟೆಲ್‌ನ ಕ್ಲೀನರ್ ಹಾಗೂ ರೂಂ ಬಾಯ್ ಸಹ ಒಬ್ಬರೇ ಆಗಿದ್ದಾರೆ. ಮುಖ್ಯವಾದ ಅಂಶವೆಂದರೆ ಪೊಲೀಸಿನವರು ಆಪಾದಿತನ ಬೆರಳ ಗುರುತು ಅಲ್ಲಿ ಸಿಕ್ಕಿದೆ ಎಂದು ಹೇಳಿದ್ದಾರೆಯೇ ಹೊರತು ಆ ಬೆರಳ ಗುರುತುಗಳಿರುವ ವಸ್ತುಗಳು ಆ ಯುವತಿಯು ಜ್ಞಾನ ತಪ್ಪುವುದಕ್ಕೆ ಕಾರಣವಾಗಿವೆ ಎಂದು ಆಪಾದಿಸಿಲ್ಲ." ಎಂದರು.




"ನೋಡಿ ಇಷ್ಟು ಸಾಕ್ಷಿಗಳು ಸಾಕಾಗಲ್ಲ. ಆ ಘಟನೆ ನಡೆದ ಸಮಯದಲ್ಲಿ ಆಪಾದಿತ ಎಲ್ಲಿದ್ದ